**All India Radio: Bangalore**
**National Bulletin In Kannada**
**20.04.2025  19.35 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ, ಜೆಡ್ಡಾ ಭೇಟಿ ; ಭಾರತ-ಸೌದಿ ಅರೇಬಿಯಾ ಸಂಬಂಧದಲ್ಲಿ ಹೊಸ ಅಧ್ಯಾಯ
2. ವಕ್ಫ್ ತಿದ್ದುಪಡಿ ಕಾಯ್ದೆಯ ಪ್ರಯೋಜನ ಕುರಿತು ಬಿಜೆಪಿಯಿಂದ ದೇಶ ವ್ಯಾಪಿ ಅಭಿಯಾನ
3. ಜಮ್ಮು-ಕಾಶ್ಮೀರದ ರಾಮ್‌ಬನ್‌ನಲ್ಲಿ ಮೇಘಸ್ಫೋಟ - ಮೂವರು ಸಾವು
4. ಐಪಿಎಲ್ ಟಿ-೨೦ ಕ್ರಿಕೆಟ್ ; ಪಂಜಾಬ್ ಕಿಂಗ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ೭ ವಿಕೆಟ್‌ಗಳ ಜಯ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ವಾರ ಜೆಡ್ಡಾಗೆ ಭೇಟಿ ನೀಡಲಿದ್ದು, ನಾಲ್ಕು ದಶಕಗಳಲ್ಲಿ ಸೌದಿ ಅರೇಬಿಯಾದ ವಾಣಿಜ್ಯ ಕೇಂದ್ರಕ್ಕೆ ಭಾರತೀಯ ಮುಖಂಡರೊಬ್ಬರ ಮೊದಲ ಭೇಟಿ ಇದಾಗಿದೆ. ಈ ಭೇಟಿಯು ಆರ್ಥಿಕ, ರಕ್ಷಣೆ, ಸಾಂಸ್ಕೃತಿಕ ಆಯಾಮಗಳಲ್ಲಿ ಭಾರತ ಮತ್ತು ಸೌದಿ ಅರೇಬಿಯಾದ ಬಾಂಧವ್ಯಗಳ ಸಮಗ್ರ ವ್ಯೂಹಾತ್ಮಕ ಪಾಲುದಾರಿಕೆಯಾಗಿದೆ. ಭಾರತ ಮತ್ತು ಸೌದಿ ಅರೇಬಿಯಾ ದೇಶಗಳು ಅತ್ಯುತ್ತಮ ಆರ್ಥಿಕ ಪಾಲುದಾರಿಕೆ ಹೊಂದಿದ್ದು, ಇತ್ತೀಚಿನ ದಶಕಗಳಲ್ಲಿ ಉನ್ನತ ಮಟ್ಟದ ವ್ಯೂಹಾತ್ಮಕ ಒಪ್ಪಂದಗಳ ಮೂಲಕ ಈ ಪಾಲುದಾರಿಕೆ ಬಲವರ್ಧನೆಗೊಂಡಿದೆ. ಸೌದಿ ಅರೇಬಿಯಾ ಭಾರತದ ೫ನೇ ಅತಿದೊಡ್ಡ ವ್ಯಾಪಾರ ಪಾಲುದಾರನಾಗಿದ್ದು, ಭಾರತ ಸೌದಿ ಅರೇಬಿಯಾ ಭಾರತವನ್ನು ೨ನೇ ಅತಿದೊಡ್ಡ ವ್ಯಾಪಾರ ಪಾಲುದಾರನಾಗಿ ಪರಿಗಣಿಸಿದೆ. ೨೦೨೩-೨೪ರ ಹಣಕಾಸು ವರ್ಷದಲ್ಲಿ ದ್ವಿಪಕ್ಷೀಯ ವ್ಯಾಪಾರ ಅಧಿಕವಾಗಿದ್ದು, ಸೌದಿ ಅರೇಬಿಯಾದಿಂದ ಭಾರತಕ್ಕೆ ಆಮದು ೩೧.೪೨ ಬಿಲಿಯನ್ ಅಮೆರಿಕನ್ ಡಾಲರ್‌ಗಳಷ್ಟಾಗಿದ್ದು, ಸೌದಿ ಅರೇಬಿಯಾಗೆ ಭಾರತದಿಂದ ಮಾಡಲಾದ ರಫ್ತು ಪ್ರಮಾಣ ೧೧.೫೬ ಬಿಲಿಯನ್ ಅಮೆರಿಕನದ ಡಾಲರ್‌ಗಳಷ್ಟಿತ್ತು. ಭಾರತದಿಂದ ರಫ್ತು ಮಾಡುವ ಪ್ರಮುಖ ವಸ್ತುಗಳಲ್ಲಿ ಅಕ್ಕಿ, ಪೆಟ್ರೋಲಿಯಂ ಉತ್ಪನ್ನಗಳು, ರಾಸಾಯನಿಕಗಳು, ಜವಳಿ, ಆಹಾರ ಉತ್ಪನ್ನಗಳು ಮತ್ತು ಪಿಂಗಾಣಿ ಟೈಲ್ಸ್ ಸೇರಿವೆ. ಭಾರತ ಕಚ್ಚಾತೈಲ, ಎಲ್‌ಪಿಜಿ ರಸಗೊಬ್ಬರಗಳು ಮತ್ತು ಪ್ಲಾಸ್ಟಿಕ್ ಉತ್ಪನ್ನಗಳು ಸೇರಿವೆ. ಎರಡೂ ದೇಶಗಳ ನಡುವೆ ಬಂಡವಾಳ ಹೂಡಿಕೆ ಹರಿವು ಹೆಚ್ಚಾಗಿದೆ. ಸೌದಿ

ಅರೇಬಿಯಾದಲ್ಲಿ ಭಾರತೀಯ ಹೂಡಿಕೆ  ಇತ್ತೀಚಿನ ವರ್ಷಗಳಲ್ಲಿ ಮೂರು ಬಿಲಿಯನ್ ಅಮೆರಿಕನ್ ಡಾಲರ್ ತಲುಪಿದೆ. ಈ ಹೂಡಿಕೆಗಳು ನಿರ್ಮಾಣ ಯೋಜನೆಗಳು, ನಿರ್ವಹಣೆ ಮತ್ತು ಸಮಾಲೋಚನಾ ಸೇವೆಗಳು, ದೂರ ಸಂಪರ್ಕಗಳು, ಮಾಹಿತಿ ತಂತ್ರಜ್ಞಾನ, ಹಣಕಾಸು ಸೇವೆಗಳು, ಸಾಫ್ಟ್‌ವೇರ್ ಅಭಿವೃದ್ಧಿ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿವೆ.

<><><>

ವಕ್ಫ್ ತಿದ್ದುಪಡಿ ಕಾಯ್ದೆಯ ಪ್ರಯೋಜನಗಳ ಬಗ್ಗೆ ಅಲ್ಪ ಸಂಖ್ಯಾತ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಭಾರತೀಯ ಜನತಾ ಪಕ್ಷ ಇಂದು ದೇಶವ್ಯಾಪ್ತಿ ವಕ್ಫ್ ಸುಧಾರ್ ಜನ ಜಾಗರಣ ಅಭಿಯಾನ ಪ್ರಾರಂಭಿಸಿದೆ. ಈ ಅಭಿಯಾನ ಮುಂದಿನ ತಿಂಗಳು ೫ರವರೆಗೆ ನಡೆಯಲಿದೆ. ಈ ಅಭಿಯಾನದಡಿಯಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಮುಸ್ಲಿಂ ಸಮುದಾಯಗಳನ್ನು ಭೇಟಿ ಮಾಡಿ ತಿದ್ದುಪಡಿ ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ.  ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಈ ತಿಂಗಳ ೧೦ ರಂದು ನವದೆಹಲಿಯ ಪ್ರಧಾನ ಕಚೇರಿಯಲ್ಲಿ ದೇಶಾದ್ಯಂತ ಪಕ್ಷದ ಪದಾಧಿಕಾರಿಗಳು ಹಾಗೂ ಇತರರು ಭಾಗವಹಿಸಿದ್ದ ಕಾರ್ಯಾಗಾರದಲ್ಲಿ ಈ ಅಭಿಯಾನವನ್ನು ಘೋಷಿಸಿದ್ದರು. ಮತಬ್ಯಾಂಕ್ ರಾಜಕಾರಣದ ಭಾಗವಾಗಿ ತಿದ್ದುಪಡಿ ಮಾಡಲಾದ ಕಾನೂನಿನ ನಿಬಂಧನೆಗಳ ಬಗ್ಗೆ ಮುಸ್ಲಿಂರನ್ನು ವಿರೋಧ ಪಕ್ಷಗಳು ದಾರಿ ತಪ್ಪಿಸುತ್ತಿವೆ ಎಂದು ಆರೋಪಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ವಕ್ಫ್ ಆಸ್ತಿಗಳ ಪಾರದರ್ಶಕತೆ ಮತ್ತು ದಕ್ಷ ನಿರ್ವಹಣೆಯೊಂದಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಿದೆ ಎಂದು ಅವರು ತಿಳಿಸಿದ್ದಾರೆ.

<><><>

ಕೇರಳದಲ್ಲಿ ಈಸ್ಟರ್ ಹಬ್ಬವನ್ನು ಆಚರಿಸಲು ಮಧ್ಯರಾತ್ರಿ ಮತ್ತು ಮುಂಜಾನೆಯ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಭಕ್ತರು ರಾಜ್ಯಾದ್ಯಂತ ಚರ್ಚ್‌ಗಳಲ್ಲಿ ಸೇರಿದ್ದರು. ಈ ಕಾರ್ಯಕ್ರಮವು ಪವಿತ್ರ ವಾರದ ಕೊನೆಯ ಹಂತವಾಗಿದ್ದು, ಪ್ರಾರ್ಥನೆ, ಪಶ್ಚಾತ್ತಾಪ ಮತ್ತು ಏಸುಕ್ರಿಸ್ತನ ಜೀವನದ ಕೊನೆಯ ಘಟ್ಟದ ಸ್ಮರಣೆಯಾಗಿದೆ. ಈ ಕುರಿತು ನಮ್ಮ ಕೊಚ್ಚಿ ವರದಿಗಾರ ವಿ.ಸಿ. ರಾಜ್‌ಮೋಹನ್ ಅವರಿಂದ ವರದಿ.

**ಧ್ವನಿ : ವಿ.ಸಿ. ರಾಜ್‌ಮೋಹನ್ (೩೨ ಸೆಕೆಂಡ್‌ಗಳು)**

<><><>

ಮುಂಬೈನಲ್ಲಿ ಮೇ ಒಂದರಿಂದ ನಾಲ್ಕವರೆಗೆ ಆಯೋಜಿಸಲಾಗಿರುವ ವಿಶ್ವ ಧ್ವನಿ- ದೃಶ್ಯ ಮತ್ತು ಮನರಂಜನಾ ಶೃಂಗಸಭೆ - ವೇವ್ಸ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಜಾಗತಿಕ ಮಾಧ್ಯಮ ಮಾತುಕತೆಯ ಮುಂದಾಳತ್ವ ವಹಿಸಲಿದ್ದಾರೆ. ಭಾರತದಲ್ಲಿ ಸೃಷ್ಟಿಸಿ- ವಿಶ್ವಕ್ಕಾಗಿ ಸೃಷ್ಟಿಸಿ ದೃಷ್ಟಿಯೊಂದಿಗೆ ಭಾರತವನ್ನು ಜಾಗತಿಕ ಮಾಧ್ಯಮ ಮನರಂಜನಾ ಕೇಂದ್ರ ಸ್ಥಾಪನೆಗೆ ಪ್ರಧಾನಿ ಅವರು, ಶಿಲಾನ್ಯಾಸ ನೆರವೇರಿಸಲಿದ್ದಾರೆ. ದೇಶಗಳ ನಡುವೆ ಧ್ವನಿ ಮತ್ತು ದೃಶ್ಯ

ಮಾಧ್ಯಮದ ಸೃಜನಶೀಲರನ್ನು ಬೆಸೆಯುವುದಕ್ಕೆ ಮತ್ತು ಮಾಧ್ಯಮ ಹಾಗೂ ಮನರಂಜನಾ ವಲಯದಲ್ಲಿ ಅಂತಾರಾಷ್ಟ್ರೀಯ ಸಹಭಾಗಿತ್ವ ಹೆಚ್ಚಿಸಲು ವೇವ್ಸ್ ಶೃಂಗಸಭೆ ಉತ್ತಮ ವೇದಿಕೆಯಾಗಿದೆ. ಸೃಜನಶೀಲ ವೃತ್ತಿಪರರು, ನೀತಿ ನಿರೂಪಕರು, ಉದ್ಯಮದ ಪ್ರಮುಖರು, ತಂತ್ರಜ್ಞಾನ ಕಂಪನಿಗಳು, ನವೋದ್ಯಮಗಳು ಹಾಗೂ ಹೂಡಿಕೆದಾರರನ್ನು ಈ ಶೃಂಗಸಭೆ ಒಂದೇ ವೇದಿಕೆಗೆ ತರಲಿದೆ.

<><><>

ಜಮ್ಮು-ಕಾಶ್ಮೀರದ ಜಮ್ಮುವಿನ ರಾಮ್‌ಬನ್ ಜಿಲ್ಲೆಯ ಸೆರಿಬಾಗ್ನಾ ಪ್ರದೇಶದಲ್ಲಿ ಮೇಘಸ್ಫೋಟದಿಂದಾಗಿ ಮೂವರು ಸಾವನ್ನಪ್ಪಿದ್ದಾರೆ. ಮೃತರಲ್ಲಿ ಇಬ್ಬರು ಮಕ್ಕಳು ಹಾಗೂ ಒಬ್ಬ ವೃದ್ಧ ಸೇರಿದ್ದಾರೆ. ಭಾರೀ ಮಳೆಯಿಂದಾಗಿ ಧರಮ್‌ಕುಂಡ್ ಗ್ರಾಮದಲ್ಲಿ ೪೦ ಮನೆಗಳು ಹಾನಿಗೊಳಗಾಗಿದ್ದು, ಈವರೆಗೆ ನೂರಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ. ಸೆರಿಬಾಗ್ನಾ ಪ್ರದೇಶದಲ್ಲಿ ಇಂದು ಬೆಳಗ್ಗೆ ಮೇಘಸ್ಫೋಟ ಸಂಭವಿಸಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ರಾಮ್‌ಬನ್ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿನ್ನೆ ರಾತ್ರಿ ಭಾರೀ ಪ್ರಮಾಣದಲ್ಲಿ ಆಲಿಕಲ್ಲು ಮಳೆಯಿಂದಾಗಿ ಹಲವು ಕಡೆ ಭೂಕುಸಿತಗಳು ಸಂಭವಿಸಿವೆ, ಬಿರುಗಾಳಿ ಬೀಸಿದೆ. ರಾತ್ರಿಯಿಡಿ ನಿರಂತರ ಮಳೆಯಿಂದಾಗಿ ರಾಮ್‌ಬನ್ ಪ್ರದೇಶದಲ್ಲಿ ಭೂಕುಸಿತಗಳು ಹಾಗೂ ಹಠಾತ್ ಪ್ರವಾಹಗಳು ಉಂಟಾದ ಕಾರಣ ಹಲವು ಕಡೆ ಆಸ್ತಿ-ಪಾಸ್ತಿಗಳು, ಜಮ್ಮು ಮತ್ತು ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಹಲವು ವಾಹನಗಳು ಜಖಂಗೊಂಡಿವೆ ಎಂದು ರಾಮ್‌ಬನ್ ಎಸ್‌ಎಸ್‌ಪಿ ಕುಲಬೀರ್ ಸಿಂಗ್ ಆಕಾಶವಾಣಿಗೆ ತಿಳಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆಗಳು ಪ್ರಗತಿಯಲ್ಲಿದ್ದು, ಭೂಕುಸಿತದಿಂದಾಗಿ ಕೆಲವು ರಸ್ತೆಗಳಲ್ಲಿ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಈ ನಡುವೆ ಕೇಂದ್ರ ವಿಜ್ಞಾನ ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಹಾಗೂ ಜಮ್ಮು-ಕಾಶ್ಮೀರ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ, ಮೇಘಸ್ಫೋಟದಿಂದ ಉಂಟಾಗಿರುವ ಜೀವ ಹಾಗೂ ಆಸ್ತಿ-ಪಾಸ್ತಿಗಳ ನಷ್ಟಕ್ಕೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ. ದುರಂತದಲ್ಲಿ ಜೀವ ಕಳೆದುಕೊಂಡ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಸಂತ್ರಸ್ತ ಪ್ರದೇಶಗಳಲ್ಲಿ ಜನರಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ರಾಮ್‌ಬನ್ ಜಿಲ್ಲಾಡಳಿತವು ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ೨೪ ಗಂಟೆಗಳ ನಿರಂತರ ನೆರವಿಗಾಗಿ ೦೧೯೯೮-೨೯೫೫೦೦, ೦೧೯೯೮-೨೬೬೭೯೦ ತುರ್ತು ಸಂಪರ್ಕ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ.

<><><>

ಯುವ ನಾಗರಿಕ ಸೇವಾ ಅಧಿಕಾರಿಗಳು ಸಮಗ್ರತೆ, ಹೊಣೆಗಾರಿಕೆ ಹಾಗೂ ಸೇವೆಯ ಅತ್ಯುನ್ನತ ಗುಣಮಟ್ಟವನ್ನು ಎತ್ತಿ ಹಿಡಿಯಬೇಕು ಎಂದು ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಪಿಂಚಣಿ ಖಾತೆ ಸಚಿವ ಡಾ. ಜಿತೇಂದ್ರ ಸಿಂಗ್ ಆಗ್ರಹಿಸಿದ್ದಾರೆ. ೨೦೨೩ನೇ ತಂಡದ ಭಾರತೀಯ

ಆಡಳಿತ ಸೇವೆಯ ತರಬೇತಿ ಪಡೆದ ಅಧಿಕಾರಿಗಳೊಂದಿಗೆ ಸಂವಹನ ನಡೆಸಿದ ಸಚಿವರು ಭಾರತದ ಆಡಳಿತಾತ್ಮಕ ಪರಿವರ್ತನೆ ಹಾಗೂ ವಿಕಸಿತ ಭಾರತ ೨೦೪೭ರ ದೃಷ್ಟಿಕೋನವನ್ನು ಪ್ರಮುಖವಾಗಿ ವಿವರಿಸಿದರು. ಭಾರತೀಯ ಆಡಳಿತ ಸೇವೆಯ ಇತಿಹಾಸದಲ್ಲಿ ಈವರೆಗಿನ ಅತಿದೊಡ್ಡ ಮಹಿಳಾ ಪ್ರಾತಿನಿಧ್ಯವನ್ನು ಶ್ಲಾಘಿಸಿದ ಸಚಿವ ಡಾ. ಜಿತೇಂದ್ರ ಸಿಂಗ್ ಪ್ರಸ್ತುತ ತಂಡದಲ್ಲಿ ೧೮೦ ಅಧಿಕಾರಿಗಳ ಪೈಕಿ ೭೪ ಮಹಿಳಾ ಅಧಿಕಾರಿಗಳಿದ್ದು, ಶೇಕಡ ೪೧ ರಷ್ಟು ಪ್ರಮಾಣ ಹೊಂದಿದ್ದಾರೆ. ಈ ದಾಖಲೆಯ ಮಹಿಳಾ ಪ್ರಾತಿನಿಧ್ಯ ಪ್ರಧಾನಮಂತ್ರಿಯವರ ಸಮಗ್ರ ಹಾಗೂ ಪ್ರಗತಿಪರ ಆಡಳಿತಕ್ಕೆ ಸಾಕ್ಷಿಯಾಗಿದೆ ಎಂದು ಡಾ. ಸಿಂಗ್ ಹೇಳಿದರು.

<><><><>

ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಚಂಡೀಗಢದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ನಿಗದಿತ ೨೦ ಓವರ್‌ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೫೭ ರನ್‌ಗಳನ್ನು ಗಳಿಸಲಷ್ಟೇ ಶಕ್ತವಾಯಿತು. ಎದುರಾಳಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ೧೮.೫ ಓವರ್‌ಗಳಲ್ಲಿ ೧೫೯ ರನ್ ಗಳಿಸಿ ೭ ವಿಕೆಟ್‌ಗಳ ಜಯಗಳಿಸಿದೆ. ಮುಂಬೈನಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ, ಮುಂಬೈ ಇಂಡಿಯನ್ಸ್ ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡಿದೆ.

<><><><>

ಜಮ್ಮು-ಕಾಶ್ಮೀರದಲ್ಲಿ ರಜೌರಿ ಹಾಗೂ ಪೂಂಚ್ ಅವಳಿ ಗಡಿ ಜಿಲ್ಲೆಗಳನ್ನು ಶೋಫಿಯಾನ್ ಜಿಲ್ಲೆಯೊಂದಿಗೆ ಸಂಪರ್ಕಿಸುವ ಪರ್ಯಾಯ ರಾಷ್ಟ್ರೀಯ ಹೆದ್ದಾರಿಯಾದ ಐತಿಹಾಸಿಕ ಮೊಗಲ್ ರಸ್ತೆಯನ್ನು ವಾಹನ ಸಂಚಾರಗಳಿಗಾಗಿ ಇಂದು ಮುಕ್ತಗೊಳಿಸಲಾಗಿದೆ. ಹಿಮಪಾತದಿಂದಾಗಿ ಒಂದು ದಿನ ಮುಚ್ಚಲ್ಪಟ್ಟ ಮೊಗಲ್ ರಸ್ತೆಯನ್ನು ಪೂಂಚ್‌ನನಿಂದ ಶೋಫಿಯಾನ್ ಕಡೆಗೆ ಪ್ರಯಾಣಿಸುವ ಲಘು ಮೋಟಾರು ವಾಹನಗಳಿಗೆ ಹೆದ್ದಾರಿ ತೆರೆಯಲಾಗಿದೆ ಎಂದು ನಮ್ಮ ಆಕಾಶವಾಣಿ ಜಮ್ಮು ಬಾತ್ಮೀದಾರರು ವರದಿ ಮಾಡಿದ್ದಾರೆ. ಆದರೆ ಜಮ್ಮು-ಶ್ರೀನಗರ ರಾಷ್ಟ್ರೀಯ ಹೆದ್ದಾರಿ, ಶ್ರೀನಗರ-ಸೋನಾಮಾರ್ಗ್ ಗುಮ್ರಿ ರಸ್ತೆ ಹಾಗೂ ಸಿಂಥಾನ್ ರಸ್ತೆಗಳು, ಹವಾಮಾನ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಮುಚ್ಚಲ್ಪಟ್ಟಿವೆ. ಮುಂದಿನ ಸೂಚನೆ ಬರುವವರೆಗೆ ಈ ಮಾರ್ಗಗಳಲ್ಲಿ ಸಂಚರಿಸದಂತೆ ಅಧಿಕಾರಿಗಳು ಪ್ರಯಾಣಿಕರಿಗೆ ಸೂಚಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>